# ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

ನಂ:1/14, 2ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟ್ ಬಿಲ್ಡಿಂಗ್, ಸಿ.ಎಸ್.ಐ.ಕಾಂಪೌಂಡ್, 3ನೇ ಕ್ರಾಸ್, ಮಿಷನ್ ರಸ್ತೆ, ಬೆಂಗಳೂರು-560027


**ನಂ.ರೇರಾ/ಎಸ್‌ಇಸಿ/ಸಿಆರ್-04/2019-20** **ದಿನಾಂಕ: 27-08-2021**

## ಅಧಿಸೂಚನೆ

**ವಿಷಯ:** ಕರ್ನಾಟಕ ರಿಯಲ್ ಎಸ್ಟೇಟ್ ಯೋಜನೆಗಳ ಉದ್ಯಮಕ್ಕೆ ಸಂಬಂಧಿಸಿದಂತೆ ಶಾಸನಬದ್ದ ಅನುಮೋದನೆಗಳು ಹಾಗೂ ನಿರಾಕ್ಷೇಪಣೆಗಳಿಗೆ ದಿನಾಂಕ:01.10.2021ರವರೆಗೆ ಕಾಲಾವಕಾಶ ವಿಸ್ತರಿಸುವ ಕುರಿತು

**ಉಲ್ಲೇಖ:**

1. ದಿನಾಂಕ:13.05.2020ರ ಸಂಖ್ಯೆ:ಒ-17024/230/2018-ಹೌಸಿಂಗ್-ಯುಡಿ/ಇಎಫ್‌ಎಸ್-9056405ರ ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಾಲಯದ ನಿರ್ದೇಶನ.
2. ದಿನಾಂಕ:19.05.2020ರ ಸಂಖ್ಯೆ: K-RERA/Sec/04/2019-20 ರ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಸುತ್ತೋಲೆ.
3. ದಿನಾಂಕ:26.04.2021 ಹಾಗೂ 09.06.2021ರಂದು ಅಧ್ಯಕ್ಷರು ಹಾಗೂ ಕಾರ್ಯದರ್ಶಿಯವರಿಗೆ ಕ್ರೆಡಾಯ್ ರವರು ಸಲ್ಲಿಸಿರುವ ಮನವಿ.
4. ದಿನಾಂಕ:13.07.2021ರ ಸಂಖ್ಯೆ:K-RERA/Sec/CR/04/2019-20ರ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಪತ್ರ.
5. ಸರ್ಕಾರದ ಕಾರ್ಯದರ್ಶಿಗಳು, ವಸತಿ ಇಲಾಖೆ ಇವರ ಪತ್ರದ ಸಂಖ್ಯೆ: ವಇ 57 ರೇರಾ 2020 ದಿನಾಂಕ:18.08.2021.

*****

**1)** ದಿನಾಂಕ: 11.03.2020ರಂದು ವಿಶ್ವ ಆರೋಗ್ಯ ಸಂಸ್ಥೆ, ಕೋವಿಡ್-19 ಅನ್ನು ಸಾಂಕ್ರಾಮಿಕ ಕಾಯಿಲೆ ಎಂದು ಘೋಷಿಸಿತು. ಸದರಿ ಕೋವಿಡ್-19 (ಕರೋನಾ ವೈರಸ್) ಸಾಂಕ್ರಾಮಿಕ ಕಾಯಿಲೆ ಮತ್ತು ಅದರ ಪರಿಣಾಮವಾಗಿ ರಾಷ್ಟ್ರವ್ಯಾಪಿ ಮಾರ್ಚ್-2020ರಿಂದ ಲಾಕ್‌ಡೌನ್ ಜಾರಿಗೆ ಬಂದಿದ್ದು, ಅದರನ್ವಯ ಕಾರ್ಮಿಕರು ತಮ್ಮ ಸ್ಥಳೀಯ ಸ್ಥಳಗಳಿಗೆ ವಲಸೆ ಹೋಗುವುದು ಮತ್ತು ನಿರ್ಮಾಣ ಸಾಮಾಗ್ರಿಗಳ ಪೂರೈಕೆ ಸರಪಳಿಯಲ್ಲಿ ತಡೆಯುಂಟಾಗಿರುವುದರಿಂದ, ದೇಶಾದ್ಯಂತ ರಿಯಲ್ ಎಸ್ಟೇಟ್ ಯೋಜನೆಗಳ ನಿರ್ಮಾಣ ಚಟುವಟಿಕೆಗಳಲ್ಲಿ ತೀವ್ರವಾಗಿ ಪರಿಣಾಮ ಬೀರಿತ್ತು.

**2)** ಉಲ್ಲೇಖ(1)ರಲ್ಲಿ ತಿಳಿಸಿರುವಂತೆ, ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಾಲಯವು ತನ್ನ ಪತ್ರದಲ್ಲಿ ರಿಯಲ್ ಎಸ್ಟೇಟ್ ಯೋಜನೆಗಳ ನೋಂದಣಿ ವಿಸ್ತರಣೆ ಮತ್ತು ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆ, 2016ರ ಅಡಿಯಲ್ಲಿ ಈಗಾಗಲೇ

ನಿಗದಿಪಡಿಸಿದ ನಿಗದಿತ ಕಾಲಮಿತಿಯಿಂದಾಗಿ ಎಲ್ಲಾ ಶಾಸನಬದ್ಧ ಅನುಸರಣೆಗಳ ಕಾಲಾವಧಿಯನ್ನು ವಿಸ್ತರಿಸುವ ಬಗ್ಗೆ ಸಲಹೆಯನ್ನು ನೀಡಿತ್ತು.

3) ಉಲ್ಲೇಖ(2)ರಲ್ಲಿ ತಿಳಿಸಿರುವಂತೆ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವು ತನ್ನ ಸುತ್ತೋಲೆಯ ಮೂಲಕ 'ಆರು ತಿಂಗಳ' ಅವಧಿಯವರೆಗೆ ಯೋಜನಾ ನೋಂದಣಿ ಅವಧಿಯನ್ನು ಪರಿಷ್ಕರಿಸಿ ಆದೇಶಿಸಿದೆ. ಮುಂದುವರೆದು, ಇದೇ ಸುತ್ತೋಲೆಯಲ್ಲಿ ರೇರಾ ಕಾಯ್ದೆ 2016 ಮತ್ತು ರೇರಾ ನಿಯಮ 2017 ರಂತೆ, ದಿನಾಂಕ:15-03-2020ರವರೆಗಿನ ಶಾಸನಬದ್ಧ ಅನುಸರಣೆಗಳ ಕಾಲಾವಧಿಯನ್ನು ದಿನಾಂಕ:15-09-2020ರವರೆಗೆ ಮರು ವಿಸ್ತರಿಸಲಾಗಿದೆ.

4) ಉಲ್ಲೇಖ(3)ರಲ್ಲಿ ತಿಳಿಸಿದಂತೆ ಕ್ರೆಡಾಯ್ ರವರು ರೇರಾ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಕಾರ್ಯದರ್ಶಿಯವರಿಗೆ ಸಲ್ಲಿಸಿರುವ ಮನವಿಗಳಂತೆ, ರಿಯಲ್ ಎಸ್ಟೇಟ್ ಯೋಜನೆಯ ಉದ್ದಿಮೆಗೆ ಸಂಬಂಧಿಸಿದಂತೆ ದಿನಾಂಕ:19.05.2020ರಲ್ಲಿನ ಸುತ್ತೋಲೆಯಂತೆ ದಿನಾಂಕ:15.03.2020ರಿಂದ ಜಾರಿಗೆ ಬರುವಂತೆ ಒಟ್ಟು ಒಂಭತ್ತು ತಿಂಗಳ ಕಾಲ ರೇರಾದಲ್ಲಿ ನೋಂದಣಿಯಾದ ಯೋಜನೆಗಳ ಪೂರ್ಣಗೊಳಿಸುವ ದಿನಾಂಕವನ್ನು ವಿಸ್ತರಿಸಿ ಆದೇಶಿಸಲಾಗಿರುತ್ತದೆ. ಅದೇ ರೀತಿ ಪ್ರಸ್ತುತ ಪ್ರಾಧಿಕಾರದಲ್ಲಿ ನೋಂದಣಿಯಾದ ಯೋಜನೆಗಳ ಪೂರ್ಣಗೊಳಿಸುವ ದಿನಾಂಕವನ್ನು ಮರು ವಿಸ್ತರಿಸುವಂತೆ ರೇರಾ ಪ್ರಾಧಿಕಾರವನ್ನು ಕೋರಿರುತ್ತಾರೆ.

5) ಉಲ್ಲೇಖ(4)ರಲ್ಲಿ ತಿಳಿಸಿರುವಂತೆ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವು ಕ್ರೆಡಾಯ್ ರವರ ಮನವಿಯನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಅವಧಿಯನ್ನು ವಿಸ್ತರಣೆ ಮಾಡುವ ಬಗ್ಗೆ ಸರ್ಕಾರದಿಂದ ಸೂಕ್ತ ನಿರ್ದೇಶನವನ್ನು ಕೋರಿ ಪತ್ರ ಬರೆಯಲಾಗಿತ್ತು.

6) ಉಲ್ಲೇಖ(5)ರಲ್ಲಿ ತಿಳಿಸಿರುವಂತೆ ಸರ್ಕಾರದ ವಸತಿ ಇಲಾಖೆಯು ರೇರಾ ಪ್ರಾಧಿಕಾರದ ಪತ್ರವನ್ನು ಕೂಲಂಕುಶವಾಗಿ ಪರಿಶೀಲಿಸಿ **"ರಾಜ್ಯದಲ್ಲಿ ಕೋವಿಡ್-19 ಎರಡನೇ ಅಲೆಯಿಂದ ಉಂಟಾಗಿರುವ ಜೀವಹಾನಿ ಮತ್ತು ಆರ್ಥಿಕ ಬಿಕ್ಕಟ್ಟಿನ ಹಿನ್ನಲೆಯಲ್ಲಿ ದಿನಾಂಕ:01.04.2021 ಮತ್ತು ಅನಂತರ ಕೊನೆಗೊಳ್ಳುವಂತಹ ಪ್ರಕರಣಗಳಿಗೆ ಮಾತ್ರ ಅನ್ವಯಿಸುವಂತೆ ದಿನಾಂಕ:01.10.2021ರವರೆಗೆ ಕಾಲಾವಕಾಶವನ್ನು ವಿಸ್ತರಿಸಲು ಅವಕಾಶ ಮಾಡಿಕೊಡುವಂತೆ ಹಾಗೂ ತತ್ಸಂಬಂಧ ಸೂಕ್ತ ಆದೇಶವನ್ನು ರೇರಾ ಕಾಯ್ದೆ ಮತ್ತು ನಿಯಮಗಳನುಸಾರ ಪ್ರಾಧಿಕಾರದ ವತಿಯಿಂದ ಹೊರಡಿಸಲು"** ಸರ್ಕಾರವು ನಿರ್ದೇಶಿಸಿರುತ್ತದೆ.

7) ಸರ್ಕಾರದ ಆದೇಶದ ಹಿನ್ನೆಲೆಯಲ್ಲಿ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಕಾಯ್ದೆ, 2016 ಮತ್ತು ನಿಯಮಗಳು, 2017ರನ್ವಯ, ರಿಯಲ್ ಎಸ್ಟೇಟ್ ಯೋಜನೆಗಳ ಉದ್ಯಮಕ್ಕೆ ಸಂಬಂಧಿಸಿದಂತೆ **ದಿನಾಂಕ:01.04.2021 ಮತ್ತು ಅನಂತರ ಕೊನೆಗೊಳ್ಳುವಂತಹ ಪ್ರಕರಣಗಳಿಗೆ ಮಾತ್ರ ಅನ್ವಯಿಸುವಂತೆ ದಿನಾಂಕ:01.10.2021 ರವರೆವಿಗೆ ಮಾತ್ರ ಕಾಲಾವಕಾಶವನ್ನು ವಿಸ್ತರಿಸಲಾಗಿದೆ.**

**ಪ್ರಾಧಿಕಾರದ ಅನುಮೋದನೆಯ ಮೇರೆಗೆ)**

23.08.2021

(ಎಲ್.ಎಸ್. ಶ್ರೀಕಂಠಬಾಬು)
ಜಂಟಿ ಕಾರ್ಯದರ್ಶಿ
ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

ರವರಿಗೆ,

1. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು, ವಸತಿ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ಮಾನ್ಯ ಅಧ್ಯಕ್ಷರ ಆಪ್ತ ಕಾರ್ಯದರ್ಶಿರವರಿಗೆ, ಮಾನ್ಯ ಅಧ್ಯಕ್ಷರ ಅವಗಾಹನೆಗೆ ತರಲು.
4. ಮಾನ್ಯ ಸದಸ್ಯರು-1 ಮತ್ತು ಮಾನ್ಯ ಸದಸ್ಯರು-2 ರವರ ಆಪ್ತ ಸಹಾಯಕರಿಗೆ, ಮಾನ್ಯ ಸದಸ್ಯರುಗಳ ಅವಗಾಹನೆಗೆ ತರಲು.
5. ಕಾರ್ಯದರ್ಶಿ, ರೇರಾ ಅವರ ಆಪ್ತ ಸಹಾಯಕರು, ಕಾರ್ಯದರ್ಶಿಯವರ ಅವಗಾಹನೆಗೆ ತರಲು.
6. ಸಿ.ಇ.ಓ/ಅಧ್ಯಕ್ಷರು, ಕ್ರೆಡಾಯ್, ಎಂ.ಜಿ.ರಸ್ತೆ, ಬೆಂಗಳೂರು.
7. ನ್ಯಾಯನಿರ್ಣಯಾಧಿಕಾರಿ, ಕೆ-ರೇರಾ.
8. ಹಣಕಾಸು ನಿಯಂತ್ರಕರು, ಕೆ-ರೇರಾ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ-ರೇರಾ.
10. ಕಾನೂನು ಸಲಹೆಗಾರರು, ಕೆ-ರೇರಾ.
11. ಅಧೀನ ಕಾರ್ಯದರ್ಶಿ, ಕೆ-ರೇರಾ.
12. ಸಿಸ್ಟಂ ಅನಾಲಿಸ್ಟ್, ಕೆ-ರೇರಾ.
13. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು